(ಶ್ರೀ ಕಡಿದಾಳ್ ಮಂಜಪ್ಪ.)

ರಿನುವಂತೆ ತಿಳಿಸಿದರು. ಆದರ ಪ್ರಕಾರ ಮೈಸೂರು ಸರ್ಕಾರದವರು 1952 ರಲ್ಲಿ ಒಂದು ಸಮಿತಿ ಏರ್ಪಡಿಸಿದರು. ಆ ಸಮಿತಿ ಎಲ್ಲಾ ಅಧಿಕಾರಿಗಳನ್ನೂ ಕೂಡ ಇಂಟರ್ವ್ಯೂ ಮಾಡಿ ಅವರ ಅರ್ಹತೆಯ ವಿಚಾರದಲ್ಲಿ ಒಂದು ಪಟ್ಟಿ ತಯಾರಿಸಿತು. ಅದನ್ನು ಸರ್ಕಾರದವರು ಭಾರತ ಸರ್ಕಾರಕ್ಕೆ ಕಳುಹಿಸಿದರು.

ಶ್ರೀ ಎಂ. ಮಾದಯ್ಯ.—ಆ ಪಟ್ಟಿಯಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ನವರಲ್ಲಿ ಎಷ್ಟು ಜನರನ್ನು ಸೇರಿಸಿದೆ ?

ಶ್ರೀ ಕಡಿದಾಳ್ ಮಂಜಪ್ಪ.—7 ಅಥವಾ 8 ಜನ ಇರಬೇಕು.

ಶ್ರೀ ಎಂ. ಮಾದಯ್ಯ.—'ಎಚ್' ಭಾಗದ ಪ್ರಶ್ನೆಗೆ ಉತ್ತರವಾಗಿ 1954ನೆಯ ಇಸವಿಯ I.A.S. ಮತ್ತು I.P.S. Recruitment Rules Provision ಕಡೆಗೆ ನಮ್ಮ ಗಮನ ಸೆಳೆದಿದ್ದೀರಿ. ಆ provision ಏನು ?

ಶ್ರೀ ಕಡಿದಾಳ್ ಮಂಜಪ್ಪ.—Recruitment ಮಾಡುವಾಗ ಶೇಕಡ 12½ ಯಷ್ಟು All India basis ಮೇಲೆ ನಿಮ್ನವರ್ಗದವರಿಗೆ ಇರತಕ್ಕದ್ದು ಎಂದು ಆ provisionನಲ್ಲಿ ಹೇಳಿದೆ.

ಶ್ರೀ ಎಂ. ಮಾದಯ್ಯ.—ಈ ರೀತಿ ಮೀಸಲಾಗಿಡಲ್ಪಟ್ಟ ಸ್ಥಾನಗಳಿಗೆ merit ಮೇಲೆ ತೆಗೆದುಕೊಳ್ಳುತ್ತಾರೆಯೇ ಅಥವಾ ಇನ್ನೇನಾದರೂ basis ಇದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—Competitive examination and merit ಎರಡನ್ನೂ ಗಮನಕ್ಕೆ ತೆಗೆದುಕೊಂಡು ಭರ್ತಿ ಮಾಡುತ್ತಾರೆ.

Mr. SPEAKER.—The Hon'ble Member has already taken ten minutes.

(SRI M. MADIAH wanted to put some more supplementaries)

Mr. SPEAKER.—You must co-operate with me. Other Members are complaining that many questions are left out. There was also a resolution on this subject discussed threadbare yesterday and the Government have replied in detail. I think the Hon'ble Member must be satisfied with that. I know that he will not be satisfied even if ten minutes more are given. But please co-operate with me.

ಶ್ರೀ ಎಂ. ಮಾದಯ್ಯ.—ಸರ್ಕಾರದವರು ಏನಾದರೂ ಪರೀಕ್ಷೆ ಏರ್ಪಡಿಸಿ ಅದರಲ್ಲಿ ತೇರ್ಗಡೆಯಾದವರನ್ನೆಲ್ಲಾ ಜಾಗ್ರತೆ ಈ cadresಗೆ ಸೇರಿಸುವ ಏರ್ಪಾಡು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇದಕ್ಕೆ ಪ್ರಾಂತ್ಯ ಸರ್ಕಾರ ಏನೂ ಮಾಡುವಹಾಗಿಲ್ಲ.

Public Service Commission (disposal of applications).

Q.—553. Sri A. MUNIYAPPA (Sidlaghatta-Chickballapur— Scheduled Castes).—

Will the Government be pleased to state :—

(*a*) the number of applications received in the Public Service Commission Office since 1952-53 to date for registration ;

(*b*) the number of applications registered ?

A.—Sri Kadidal MANJAPPA (Minister for Revenue and Public Works).—

	1952-53.	*1953-54.*
(*a*) and (*b*) Number of applications received in response to advertisement for issuing approved lists of candidates for different kinds and classes of appointments.	10,301	14,584
Number of candidates selected and assigned in the approved lists.	2,981	2,292

Note.—Applications are not received and registered for appointments. But once in a year, approved lists of candidates are issued after inviting applications for different kinds and classes of appointments.

ಶ್ರೀ ಎ. ಮುನಿಯಪ್ಪ.—ಬೇರೆ ಬೇರೆ ನೌಕರಿಗಳಿಗೆ ಈ ಹಂಚಿಕೆಯನ್ನು ಯಾವ ಆಧಾರದಮೇಲೆ ಮಾಡುತ್ತೀರಿ ?

*ಶ್ರೀ ಕಡಿದಾಳ್ ಮಂಜಪ್ಪ.—ಇದಕ್ಕೆಲ್ಲಾ recruitment rules ಇದೆ. ಅದಕ್ಕನುಗುಣವಾಗಿ ಬಂದ ಅರ್ಜಿಗಳನ್ನು ಗಣನೆಗೆ ತೆಗೆದುಕೊಂಡು ಪಬ್ಲಿಕ್ ಸರ್ವಿಸ್ ಕಮಿಷನ್ ಇದನ್ನು ನಿರ್ಧರ ಮಾಡುತ್ತದೆ.

ಶ್ರೀ ಎ. ಮುನಿಯಪ್ಪ.—ಈ ಬಗ್ಗೆ ಉಮೇದುವಾರರನ್ನು select ಮಾಡಬೇಕಾದರೆ interview ಮೂಲಕ ನಿರ್ಧರ ಮಾಡುವುದಕ್ಕೆ ಮೊದಲು ಅಥವಾ ಪರೀಕ್ಷೆಯಲ್ಲಿ ಇವರುಗಳಿಗೆ ಬಂದಿರುವ ನಂಬರುಗಳನ್ನು ಗಣನೆಗೆ ತೆಗೆದುಕೊಳ್ಳುವುದಕ್ಕೆ ಮೊದಲು, ಶಿಫಾರಸಿನ ಮೇಲೆ ಇವರುಗಳನ್ನು ಆರಿಸಿಕೊಳ್ಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

Drinking water wells in Kudligi Taluk (Construction).

Q.—120. Sri K. KOTRABASAVANA GOWD (Kudligi).—

Will the Government be pleased to state :—

(*a*) the names of villages without drinking water wells in Kudligi Taluk;